ಊ) ಸದರಿ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ನಿರ್ಮಾಣದ ಸ್ಥಳವು ಮಲಪ್ರಭಾ ಜಲಾಶಯದ ಹಿನ್ನೀರಿನಲ್ಲಿ ಮುಳುಗುತ್ತಿದ್ದು, ಪ್ರತಿ ವರ್ಷ ಜಲಾಶಯದ ನೀರಿನ ಮಟ್ಟ ಕಡಿಮೆಯಾದ ನಂತರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗುತ್ತಿತ್ತು. ಆದ ಕಾರಣ ಜಾಕ್‌ವೆಲ್ ನಿರ್ಮಾಣದ ಕಾರ್ಯದಲ್ಲಿ ವಿಳಂಬವಾಗಿರುತ್ತದೆ. ಯಂತ್ರೋಪಕರಣಗಳ ಸ್ಥಾವರದ ಕೆಲಸವನ್ನು ಜನವರಿ–2003ರಲ್ಲಿ ಪ್ರಾರಂಭಿಸಿದ್ದು, ಎಲ್ಲ ಯಂತ್ರೋಪಕರಣ ಹಾಗೂ ವಿದ್ಯುತ್ ಸ್ಥಾವರಗಳ ಕೆಲಸಗಳು ಪೂರ್ಣಗೊಂಡಿರುತ್ತವೆ. ಮೀಟರಿಂಗ್ ಕ್ಯೂಬಿಲ್‌ನ್ನು ವಿದ್ಯುತ್ ಇಲಾಖೆಯವರು ಅಳವಡಿಸಬೇಕಾಗಿದೆ. ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರೊಂದಿಗೆ ಜುಲೈ–2005ರ ಒಳಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

2299(2129) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಕೇಂದ್ರ ಸ್ಥಾನದಿಂದ ಖಾಸಗಿ ಬಸ್‌ನವರಿಗೆ 20 ಕಿ.ಮೀ ವರೆಗೆ ಬಸ್ ನಡೆಸಲು ಅವಕಾಶ ನೀಡುವ ಅಧಿಸೂಚನೆಯನ್ನೇನಾದರು ಸರ್ಕಾರ ಹೊರಡಿಸಿದೆಯೇ;

ಆ) ಈ ಅಧಿಸೂಚನೆಯಿಂದ ಸರ್ಕಾರ ಸಂಸ್ಥೆಗೆ ನಷ್ಟವಾಗುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೆ:

ಇ) ಹಾಗಿದ್ದಲ್ಲಿ ಈ ಅಧಿಸೂಚನೆ ರದುಗೊಳಿಸಲು ಸರ್ಕಾರ ಚಿಂತಿಸಿದೆಯೇ;

ಈ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಬೇಂದ್ರೆ, ನಗರ ಸಾರಿಗೆ ಸಂಸ್ಥೆಗೆ ಪರವಾನಗಿ ಕೊಟ್ಟಿರುವುದರಿಂದ ಅಲ್ಲಿನ ಜನ ಇದನ್ನು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಪರವಾಗಿ ವಾಪಸ್ಸು ಪಡೆಯಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಪರಿಶೀಲನೆಯಲ್ಲಿದೆ.

2300(3096) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಲ್ಕು ದಶಕದ ಹಿಂದೆ ಗುದ್ದಲಿ ಪೂಜೆ ಮಾಡಿದಂದಿನಿಂದ ಮದ್ಯ ಕರ್ನಾಟಕದ ಭದ್ರಾ ನಾಲೆಗಳು ದುರಸ್ತಿಯನ್ನು ಕಾಣದೇ ಅವ್ಯವಸ್ಥೆಯ ಪರಮಾವಧಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನಾಲೆಯ ಬದಿಯಲ್ಲಿ ಹೂಳು ತುಂಬಿ ಗಿಡ-ಗಂಟೆಗಳು ಬೆಳೆದು ಕೊರಕಲು ಬಿದ್ದು ನೀರು ಬಂದರೂ ನೀರು ದಿಕ್ಕಾಪಾಲಾಗುವ ಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಒಟ್ಟಾರೆ ಈ ನಾಲೆ ಸುಸ್ಥಿತಿಗೊಳಿಸಿ ಆಧುನೀಕರಣಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ?

ಈ) ನಡೆಸಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಭದ್ರಾ ನಾಲೆಗಳು ನಾಲ್ಕು ದಶಕಗಳ ಸತತ ಉಪಯೋಗದಿಂದ ಶಿಥಿಲಾವಸ್ಥೆಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಾಲೆಗಳು ಅನಲೈನ್ಡ್ ಆಗಿರುವುದರಿಂದ ಉಂಟಾಗುವ ನೀರಿನ ಬಸಿಯುವಿಕೆ, ನಾಲೆಗಳ ಸತತ ಉಪಯೋಗದಿಂದ ಉಂಟಾದ ಕೊರಕಲುಗಳಿಂದ ಮತ್ತು ಕಟ್ಟಡಗಳಲ್ಲಿನ ಮೂಲಕ ನೀರು ಸೋರುವಿಕೆ ಕಾರಣಗಳಿಂದ ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ನಾಲೆಗಳನ್ನು ಆಧುನೀಕರಣಗೊಳಿಸಿ ಸುಸ್ಥಿತಿಯಲ್ಲಿಡಲು ಸರ್ಕಾರವು ಚಿಂತನೆ ನಡೆಸಿದೆ.

ಈ) 1998-1999ನೇ ಸಾಲಿನಲ್ಲಿ ನಾಲೆಯಲ್ಲಿ ಸುಸ್ಥಿತಿಗೊಳಿಸಲು ಅತೀ ಜರೂರಾಗಿ ದುರಸ್ತಿಯಾಗಬೇಕಾಗಿದ್ದ ಕಾಲುವೆ ಕಟ್ಟಡಗಳ ದುರಸ್ತಿ ಮುಖ್ಯ ಹಾಗೂ ಶಾಖಾ ಕಾಲುವೆಯಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು ರೂ. 20.89 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿರುತ್ತದೆ.

ಭದ್ರಾ ನಾಲೆಯನ್ನು ಸುಸ್ಥಿತಿಗೊಳಿಸಿ ಆಧುನೀಕರಣಗೊಳಿಸುವ ಬಗ್ಗೆ ರೂ. 471.00 ಕೋಟಿ ಮೊತ್ತದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಭದ್ರಾ ಕಾಲುವೆಗಳ ಆಧುನೀಕರಣ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ ಮೂಲಕ ಕೈಗೊಳ್ಳಲು ಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಎ.ಐ.ಬಿ.ಪಿ (ಸಮಗ್ರ ತ್ವರಿತ ನೀರಾವರಿ ಕಾರ್ಯಕ್ರಮ) ಅಡಿಯಲ್ಲಿ ಆರ್ಥಿಕ ನೆರವನ್ನು ಪಡೆಯುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

2301(3234) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎನ್. ಆರ್ ಪುರ ತಾಲ್ಲೂಕು ಕಡುಹಿನ ಬೈಲು ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?